ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 45-52
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪುಟ್ಟಣ್ಣ ಕಣಗಾಲ್ ಸಿನಿಮಾಗಳ ಕುರಿತು ಒಂದು ಅವಲೋಕನ

**ಶಿವಶಂಕರ ಸಿ.ಎನ್[1] ಮತ್ತು ಡಾ.ಟಿ.ಶ್ರೀಪತಿ[2]**

[1]ಸಂಶೋಧನಾ ವಿದ್ಯಾರ್ಥಿ, ವಿದ್ಯುನ್ಮಾನ ಮಾಧ್ಯಮ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2]ಸಹ ಪ್ರಾಧ್ಯಾಪಕರು, ವಿದ್ಯುನ್ಮಾನ ಮಾಧ್ಯಮ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***Abstract:***

*ಎಸ್. ಆರ್. ಪುಟ್ಟಣ್ಣ ಕಣಗಾಲ್ (ಡಿಸೆಂಬರ್ 1, 1933 – ಜೂನ್ 5, 1985) ಕನ್ನಡದ ಪ್ರಸಿದ್ಧ ಹಾಗು ಸೃಜನಶೀಲ ನಿರ್ದೇಶಕರಲ್ಲಿ ಒಬ್ಬರು. ಕನ್ನಡ ಚಿತ್ರರಂಗ ಕಂಡ ಅದ್ವಿತೀಯ ಚಲನಚಿತ್ರ ನಿರ್ದೇಶಕರಲ್ಲದೆ ಚಿತ್ರಕಥೆ ಮತ್ತು ಸಂಭಾಷಣೆಯನ್ನು ಸಹ ಬರೆಯುತ್ತಿದ್ದರು. ಇವರ ಚಿತ್ರಗಳು ಅತ್ಯಂತ ಉತ್ಕೃಷ್ಟ ಮಟ್ಟದ್ದೆಂದು ಸಾಕಷ್ಟು ಚಿತ್ರಪ್ರೇಮಿಗಳು ವಿಮರ್ಶಕರು ಸಾಹಿತಿಗಳು ಅಭಿಪ್ರಾಯ ಪಡುತ್ತಾರೆ. ಸಾಮಾನ್ಯವಾಗಿ ಕಲೆ, ಭಾವನಾತ್ಮಕತೆಯಿಂದ ಕೂಡಿದ ಚಿತ್ರಗಳನ್ನು ನಿರ್ದೇಶಿಸುತ್ತಿದ್ದ ಕಣಗಾಲ್, ಕನ್ನಡ ಸಿನಿಮಾಕ್ಕೆ ಹೊಸ ರೂಪ ತಂದವರು. ಮೈಸೂರಿನ ಯುವಸಾಹಿತಿ ವಿ.ಶ್ರೀಧರ ಅವರು ಪುಟ್ಟಣ್ಣ ಕಣಗಾಲರ ಚಲನಚಿತ್ರಗಳ ಕುರಿತ ಕೃತಿ 'ಕನ್ನಡ ಚಲನಚಿತ್ರರಂಗಕ್ಕೆ ಪುಟ್ಟಣ್ಣ ಕಣಗಾಲರ ಕೊಡುಗೆ' ಎಂಬ ಕೃತಿಯನ್ನು ಹೊರತಂದಿರುವುದನ್ನು ಕಾಣಬಹುದು.*

***Keywords:*** *ಕನ್ನಡ ಚಿತ್ರರಂಗ, ಸಿನಿಮಾ, ಪುಟ್ಟಣ್ಣ ಕಣಗಾಲ್, ನಿರ್ದೇಶಕರು, ಚಿತ್ರ ಸಾಹಿತಿ.*

## ಪೀಠಿಕೆ

ಪುಟ್ಟಣ್ಣ ಕಣಗಾಲ್ ರವರು ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಕಣಗಾಲ್ ಎಂಬ ಗ್ರಾಮದಲ್ಲಿ ಜನಿಸಿದರು. ಇವರ ಮೊದಲ ಹೆಸರು "ಶುಬ್ರವೇಷ್ಠಿ ರಾಮಸ್ವಾಮಯ್ಯ ಸೀತಾರಾಮ" ಮುಂದೆ ಆದದ್ದು ಎಸ್.ಆರ್.ಪುಟ್ಟಣ್ಣ ಕಣಗಾಲ್. ಕನ್ನಡ ಚಿತ್ರರಂಗದ ಚಿತ್ರ ಸಾಹಿತಿ ಕಣಗಾಲ್ ಪ್ರಭಾಕರ ಶಾಸ್ತ್ರಿ ಇವರ ಸಹೋದರರು.

ಪುಟ್ಟಣ್ಣರವರು ಚಿತ್ರರಂಗಕ್ಕೆ ಬರುವ ಮುನ್ನ ನಾಟಕ ಕಂಪೆನಿ, ಡ್ರೈವರ್, ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಬಿ.ಆರ್. ಪಂತುಲು ಅವರ ಬಳಿ 1954ರಲ್ಲಿ ಡೈಲಾಗ್ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಪುಟ್ಟಣ್ಣ ಕಣಗಾಲ್ ಬಿ.ಆರ್. ಪಂತುಲು ಅವರನ್ನು ತನ್ನ ಗುರುವೆಂದು ಭಾವಿಸಿದರು. ನಂತರದ ದಿನಗಳಲ್ಲಿ ಪುಟ್ಟಣ್ಣನವರು ಪದ್ಮಿನಿ ಪಿಚ್ಚರ್ಸ್‌ನ ಸಹಾಯಕ ನಿರ್ದೇಶಕನಾಗಿ ಬಡ್ತಿ ಪಡೆದರು. ಪ್ರಚಾರದ ಹುಡುಗನಾಗಿ ವೃತ್ತಿಜೀವನ ಪ್ರಾರಂಭಿಸಿದ ಕಣಗಾಲ್, ರಂಗಭೂಮಿಯಲ್ಲಿ ಕೆಲಸ ಮಾಡಿದ ನಂತರ ಸ್ವತಂತ್ರ ಚಲನಚಿತ್ರ ನಿರ್ದೇಶಕರಾಗಿ ಆಕರ್ಷಿತರಾದರು. ಪುಟ್ಟಣ್ಣನವರ ಚಿತ್ರಗಳ ಮೂಲಕ ಅನೇಕ ಚಿತ್ರಕಲಾವಿದರು ಬೆಳಕಿಗೆ ಬಂದಿದ್ದಾರೆ. ಅವರಲ್ಲಿ ಪ್ರಮುಖವಾಗಿ ಕಲ್ಪನಾ, ಆರತಿ, ಪದ್ಮಾ ವಾಸಂತಿ ವಿಷ್ಣುವರ್ಧನ್, ರಾಮಕೃಷ್ಣ, ಜೈಜಗದೀಶ್, ಅಂಬರೀಶ್, ಶ್ರೀನಾಥ್, ಶ್ರೀಧರ್ ಮೊದಲಾದವರು.

ಕಣಗಾಲ್ ಅವರು ಮೂರು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು, ಮೂರು ಫಿಲ್ಮ್‌ಫೇರ್

***Please cite this article as:*** ಶಿವಶಂಕರ ಸಿ.ಎನ್ ಮತ್ತು ಟಿ.ಶ್ರೀಪತಿ. (2025). ಪುಟ್ಟಣ್ಣ ಕಣಗಾಲ್ ಸಿನಿಮಾಗಳ ಕುರಿತು ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 45–52

ಪ್ರಶಸ್ತಿಗಳು ಮತ್ತು ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದರು. ಇವರು ಚಿತ್ರರಂಗಕ್ಕೆ ನೀಡಿದ ಅಪಾರ ಸೇವೆಯನ್ನು ಪರಿಗಣಿಸಿ ಪುಟ್ಟಣ್ಣ ಕಣಗಾಲ್ ಹೆಸರಿನಲ್ಲಿ ನಿರ್ದೇಶಕರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

ಕಣಗಾಲ್ ಅವರು ಮೊದಲು ನಿರ್ದೇಶಿಸಿದ ಸಿನೆಮಾ 1964ರ ಮಲಯಾಳಂ ಭಾಷೆಯ 'ಸ್ಕೂಲ್ ಮಾಸ್ಟರ್'. ನಂತರ ಅವರು ತ್ರಿವೇಣಿಯವರ ಕನ್ನಡ ಕಾದಂಬರಿ ಬೆಕ್ಕಿನ ಕಣ್ಣು ಆಧಾರಿತ ಎಂಬ ಮತ್ತೊಂದು ಮಲಯಾಳಂ ಚಿತ್ರ ಪೂಚಕ್ಕನ್ನಿ ನಿರ್ದೇಶಿಸಿದ್ದರು. ನಿರ್ದೇಶಕರಾಗಿ ಪುಟ್ಟಣ್ಣ ಅವರ ಮೊದಲ ಕನ್ನಡ ಚಿತ್ರ 1967 ರಲ್ಲಿ ಮೂಡಿಬಂದ ಬೆಳ್ಳಿಮೋಡ. ಗೆಜ್ಜೆ ಪೂಜೆ, ಶರಪಂಜರ, ನಾಗರಹಾವು ಮುಂತಾದ ಅನೇಕ ಮೇರು ಚಲನಚಿತ್ರಗಳನ್ನು ನಿರ್ದೇಶಿಸಿದರು. ಅವರ ಕೊನೆಯ ಚಿತ್ರ ಸಾವಿರ ಮೆಟ್ಟಿಲು ಆದರೆ ಈ ಚಿತ್ರವು ಅವರ ಜೀವಿತಾವಧಿಯಲ್ಲಿ ಬಿಡುಗಡೆಯಾಗಲಿಲ್ಲ.

ಮಸಣದ ಹೂವು ಚಿತ್ರವು ತಯಾರಿಕೆ ಹಂತದಲ್ಲಿದ್ದಾಗ ಜೂನ್ 5, 1985 ರಂದು ಚೆನ್ನೈನಲ್ಲಿ ನಿಧನರಾದರು. ಚಿತ್ರೀಕರಣಗೊಂಡಿದ್ದ 'ಮಸಣದ ಹೂವು' ಚಿತ್ರದ ಉಳಿದ ಭಾಗವನ್ನು ಪುಟ್ಟಣ್ಣನವರ ಶಿಷ್ಯರಾದ ಕೆ.ಎಸ್.ಎಲ್.ಸ್ವಾಮಿಯವರು ಪೂರ್ಣಗೊಳಿಸಿದರು. ಎಪ್ಪತ್ತರ ದಶಕದಲ್ಲಿ ಅವರು ತೊಡಗಿಸಿಕೊಂಡಿದ್ದ "ಸಾವಿರ ಮೆಟ್ಟಿಲು"ಚಿತ್ರವನ್ನು ಅದರ ನಿರ್ಮಾಪಕರಾದ ಡಿ.ಬಿ. ಬಸವೇಗೌಡರು ಪೂರ್ಣಗೊಳಿಸಿ ಬಿಡುಗಡೆ ಮಾಡಿದರು.

ಡಿ.ಬಿ. ಬಸವೇಗೌಡ ಎಂಬ ಲೇಖಕರು ಪುಟ್ಟಣ್ಣ ಕಣಗಾಲ್ ಜೀವನ ಚರಿತ್ರೆಯನ್ನು 'ಬೆಳ್ಳಿ ತೆರೆ ಭಾವಶಿಲ್ಪಿಯಲ್ಲಿ' ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಕನ್ನಡದ ಖ್ಯಾತ ಕಾದಂಬರಿಕಾರರಾದ ಎಂ.ಕೆ. ಇಂದಿರಾ ರವರು "ಚಿತ್ರ ಶಿಲ್ಪಿ ಪುಟ್ಟಣ್ಣ ಕಣಗಾಲ್" ಎಂಬ ಗ್ರಂಥವನ್ನು ಕೂಡ ಬರೆದಿದ್ದಾರೆ.

ಕಣಗಾಲ್ ನಿರ್ದೇಶಿಸಿರುವ 24 ಚಿತ್ರಗಳಲ್ಲಿ 18 ಚಿತ್ರಗಳು ಕಾದಂಬರಿ ಆಧಾರಿತ ಚಿತ್ರಗಳು. ತ್ರಿವೇಣಿಯವರ 'ಬೆಳ್ಳಿಮೋಡ', 'ಶರಪಂಜರ', ತರಾಸುರವರ 'ನಾಗರಹಾವು', 'ಮಸಣದ ಹೂ', ಎಂ.ಕೆ ಇಂದಿರಾ ಅವರ 'ಗೆಜ್ಜೆಪೂಜೆ', ಆರ್ಯಾಂಭ ಪಟ್ಟಾಭಿಯವರ 'ಕಪ್ಪು ಬಿಳುಪು', ಅನುಪಮಾ ನಿರಂಜನಾರವರ 'ಋಣಮುಕ್ತಳು', ಭಾರತೀಸುತರವರ' ಎಡಕಲ್ಲುಗುಡ್ಡದ ಮೇಲೆ', ಅಶ್ವತ್ಥರವರ 'ರಂಗನಾಯಕಿ', ದೇವಕೀ ಮೂರ್ತಿಯವರ 'ಉಪಾಸನೆ' ಇವು ಸಾಕಷ್ಟು ಜನ ಮನ್ನಣೆಯನ್ನು ಪಡೆದಿವೆ ಅಷ್ಟೇ ಅಲ್ಲದೆ ಕಲಾರಸಿಕರ ಮನ ಗೆದ್ದಿವೆ ಎಂದು ಹೇಳಬಹುದು.

ಪುಟ್ಟಣ್ಣ ಕಣಗಾಲ್‌ರವರು ನಿರ್ದೇಶಕರಾಗಿ ಹಲವಾರು ಹೊಸ–ಹೊಸ ಪ್ರತಿಭೆಗಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದರು. ಅವರಲ್ಲಿ ವಿಷ್ಣುವರ್ಧನ್, ಅಂಬರೀಶ್, ಕಲ್ಪನಾ, ಆರತಿ, ಶ್ರೀನಾಥ್ ಪ್ರಮುಖರು.

**ಅಂಬರೀಶ್**

ಅಂಬರೀಶ್‌ರವರು ಮಂಡ್ಯ ಜಿಲ್ಲೆಯ ದೊಡ್ಡರಸಿನಕೆರೆ ಗ್ರಾಮದಲ್ಲಿ ಹುಚ್ಚೇಗೌಡ ಮತ್ತು ಪದ್ಮಮ್ಮ ದಂಪತಿಗಳ ಏಳು ಮಕ್ಕಳಲ್ಲಿ ಆರನೆಯವರಾಗಿ 29 ಮೇ 1942 ರಂದು ಜನಿಸಿದರು. ಪುಟ್ಟಣ್ಣ ಕಣಗಾಲ್‌ರವರ ನಾಗರಹಾವು ಚಿತ್ರದ ವಿಶೇಷ ಪಾತ್ರಕ್ಕೆ ಕಲಾವಿದರ ಹುಡುಕಾಟದಲ್ಲಿದ್ದಾಗ ಅಂಬರೀಶ್ ಅವರ ಕಣ್ಣಿಗೆ ಬಿದ್ದರು. ಅಂಬರೀಶ್‌ರವರ ನಡಿಗೆ ಮತ್ತು ಡೈಲಾಗ್ ಗಮನಿಸಿ ಮುಂದೆ ಒಳ್ಳೆ ನಟನಾಗುತ್ತಾನೆ ಎಂದು ಭಾವಿಸಿ ನಾಗರ ಹಾವು ಚಿತ್ರದಲ್ಲಿ ಅವಕಾಶ ಕೊಟ್ಟರು. ನಂತರದಲ್ಲಿ ಪಡುವಾರಳ್ಳಿ ಪಾಂಡವರು, ಶುಭಮಂಗಳ, ಮಸಣದ ಹೂವು ಮತ್ತು ರಂಗನಾಯಕಿ ಚಿತ್ರಗಳಲ್ಲಿಯೂ ಕೂಡ ಅಂಬರೀಶ್ ರವರಿಗೆ ಅವಕಾಶಕೊಟ್ಟರು ಉತ್ತಮ ನಟರನ್ನಾಗಿ ರೂಪಿಸಿದರು.

**ಆರತಿ**

ಆರತಿರವರು ಮೈಸೂರಿನ ಗೋಪಾಲಕೃಷ್ಣ ಮತ್ತು ನಾಗಲಕ್ಷ್ಮಿ ದಂಪತಿಗಳಿಗೆ 1954ರಲ್ಲಿ ಜನಿಸಿದರು. ಇವರು ಭರತನಾಟ್ಯ ಮತ್ತು ಕುಚಿಪುಡಿ ನೃತ್ಯ ಶಿಕ್ಷಣ ಪಡೆದ ನಂತರ ಅನೇಕ ಕನ್ನಡ ಚಿತ್ರದಲ್ಲಿ ನಟಿಸುವ ಅವಕಾಶ ದೊರೆಯಿತು.

**ರಂಗನಾಯಕಿ**

ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ ಕನ್ನಡ ಸಿನಿಮಾ ಅಂಬರೀಶ್ ಮತ್ತು ಆರತಿ ನಟಿಸಿದ ಈ ಚಿತ್ರ ರಂಗಭೂಮಿ ಕನಸು ಹೊತ್ತ ಕಲಾವಿದರುಗಳ ಜೀವನದ ಕುರಿತಾಗಿದೆ. ಪುಟ್ಟಣ್ಣ ಕಣಗಾಲ್ ಅವರ ಕಲಾತ್ಮಕ ಶೈಲಿಯಲ್ಲಿ ಚಿತ್ರ ಮೂಡಿಬಂದಿದೆ ಆರತಿಯವರ ಮನೋಜ್ಞ ಅಭಿನಯದಿಂದಾಗಿ ಅವರು ಇಂದಿಗೂ ಕನ್ನಡ ಚಲನಚಿತ್ರ ರಂಗದಲ್ಲಿ ರಂಗನಾಯಕಿ ಎಂದು ಗುರುತಿಸಲ್ಪಡುತ್ತಾರೆ. ಅವರ ಚಿತ್ರರಂಗ ಜೀವನದಲ್ಲಿ ಇದೊಂದು ಮೈಲಿಗಲ್ಲು. 1981 ರಲ್ಲಿ ತೆರೆಕಂಡ ಈ ಚಿತ್ರ ಅಂಬರೀಶ್ ಆರತಿ, ರಾಮಕೃಷ್ಣ, ಅಶೋಕ್, ರಾಜಾನಂದ, ಅಶ್ವತ್ಥ ಮುಂತಾದವರು ನಟಿಸಿದ್ದಾರೆ.

**ಶುಭಮಂಗಳ**

ಶುಭ ಮಂಗಳ ಇದು ಕಾದಂಬರಿ ಆಧಾರಿತ ಚಲನಚಿತ್ರವಾಗಿದ್ದು, ಈ ಚಿತ್ರದಲ್ಲಿ ಆರತಿ ಮತ್ತು ಶ್ರೀನಾಥ್ ನಟಿಸಿದ್ದಾರೆ. ಪೋಷಕ ಪಾತ್ರದಲ್ಲಿ ಶಿವರಾಮ್, ಅಂಬರೀಶ್, ಮುಸುರಿ ಕೃಷ್ಣಮೂರ್ತಿ ಮತ್ತು ಕೆ.ಎಸ್.ಅಶ್ವಥ್ ಇದ್ದಾರೆ. ಈ ಚಿತ್ರದಲ್ಲಿ ಹೇಮಾ ತನ್ನ ತಂದೆಯಿಂದ ಚಿಕ್ಕ ಪಟ್ಟಣದಲ್ಲಿ ಬೆಳೆದ ಮುದ್ದು ಹುಡುಗಿ. ತಿಮ್ಮ ಮತ್ತು ಮೂಗ ಅವಳ ಸೇವಕರು, ಆದರೆ ಅವಳು ತನ್ನ ಸ್ನೇಹಿತರಂತೆಯೇ ಅವರನ್ನು ನೋಡಿಕೊಳ್ಳುತ್ತಾಳೆ. ಹೇಮಾ ಲವಲವಿಕೆಯಿಂದ ಕೂಡಿರುತ್ತಾಳೆ ಮತ್ತು ಮದುವೆಯ ವಯಸ್ಸಿಗೆ ಬಂದರೂ ಎಲ್ಲಾ ವಿಷಯಗಳಲ್ಲಿ ಮಗುವಿನಂತೆ ವರ್ತಿಸುತ್ತಾಳೆ. ಬಹಳ ವರ್ಷಗಳ ನಂತರ ತಮ್ಮ ಊರಿಗೆ ಬಂದಿರುವ ತನ್ನ ಸೋದರ ಸಂಬಂಧಿ ಪ್ರಭಾಕರನನ್ನು ಭೇಟಿಯಾಗುತ್ತಾಳೆ. ದೀರ್ಘಕಾಲದ ಕೌಟುಂಬಿಕ ಕಲಹದಿಂದ ಪ್ರಭಾಕರನನ್ನು ದ್ವೇಷಿಸುವ ಹೇಮಾಳ ತಂದೆ ಅವಳ ಮನಸ್ಸಿನಲ್ಲಿಯೂ ದ್ವೇಷದ ಬೀಜಗಳನ್ನು ಬಿತ್ತುತ್ತಾನೆ. ವಿಧಿಯ ಟ್ವಿಸ್ಟ್‌ನಲ್ಲಿ, ಹೇಮಾಳ ತಂದೆ ತನ್ನೆಲ್ಲ ಸಂಪತ್ತನ್ನು ಕಳೆದುಕೊಂಡು ತೀರಿಹೋದಾಗ, ಹೇಮಾ ಮತ್ತು ಅವಳ ಇಬ್ಬರು ಸೇವಕರು ಪ್ರಭಾಕರನೊಂದಿಗೆ ಹೋಗುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಸ್ವಾಭಿಮಾನಿ ಹೇಮಾ ಉದ್ಯೋಗವನ್ನು ಕೈಗೆತ್ತಿಕೊಂಡು ಸ್ವಾವಲಂಬಿಯಾಗಲು ಶ್ರಮಿಸುತ್ತಾಳೆ. ವಿಧಿಯ ಮತ್ತೊಂದು ತಿರುವು ಅವಳ ಸಂಪತ್ತನ್ನು ಅವಳಿಗೆ ಹಿಂದಿರುಗಿಸಿದಾಗ, ಅವಳು ಕಲಿಸಿದ ದ್ವೇಷ ಮತ್ತು ಅವನು ಸುರಿಸಿದ ಪ್ರೀತಿಯ ನಡುವೆ ಆಯ್ಕೆ ಮಾಡಲು ಒತ್ತಾಯಿಸಲಾಗುತ್ತದೆ. ಈ ಚಲನಚಿತ್ರವು ಹೇಮಾಳ ಪಾತ್ರವು ಹಾಳಾದ ಶ್ರೀಮಂತ ಹುಡುಗಿಯಿಂದ ಸ್ವತಂತ್ರ ಮತ್ತು ಪ್ರಬುದ್ಧ ನಿರ್ಧಾರವನ್ನು ತೆಗೆದುಕೊಳ್ಳುವ ಸಾಮರ್ಥ್ಯವಿರುವ ಮಧುರ ಮಹಿಳೆಯ ಬೆಳವಣಿಗೆಯ ಅತ್ಯುತ್ತಮ ಅಧ್ಯಯನವಾಗಿದೆ.

ಈ ಸಿನಿಮಾ ಚಿತ್ರೀಕರಣದ ವೇಳೆ ಪುಟ್ಟಣ್ಣ ಮತ್ತು ಆರತಿ ಆತ್ಮೀಯರಾದರು ಎನ್ನಲಾಗಿದೆ. ಅವರು ನಂತರ ಮದುವೆಯಾದರು. ಕನ್ನಡದ ಖ್ಯಾತ ಬರಹಗಾರ ಬೀಚಿ ಸಂಭಾಷಣೆ ಬರೆದಿದ್ದಾರೆ. ಇದು ಶರಪಂಜರ ಮತ್ತು ನಾಗರಹಾವು ಜೊತೆಗೆ ಪುಟ್ಟಣ್ಣನವರ ಟಾಪ್ ಮೂರು ಯಶಸ್ವಿ ಸಿನಿಮಾಗಳಲ್ಲಿ ಸ್ಥಾನ ಪಡೆದಿದೆ. ಚಿತ್ರವು ತನ್ನ ಚತುರ ನಿರ್ದೇಶನಕ್ಕೆ ಹೆಸರುವಾಸಿಯಾಗಿದೆ. ಇದು ಸಿನಿಮಾ ಮಾಧ್ಯಮದ ಮೇಲೆ ಪುಟ್ಟಣ್ಣನವರ ಹಿಡಿತವನ್ನು ತೋರಿಸುತ್ತದೆ. ವಾಣಿಯವರ ಕಾದಂಬರಿಯು ಸಾಹಿತ್ಯಿಕ ಸ್ವರೂಪದ್ದಾಗಿತ್ತು, ಮುಖ್ಯವಾಗಿ ನಾಯಕಿಯ ಆಂತರಿಕ ಭಾವನೆಗಳೊಂದಿಗೆ ವ್ಯವಹರಿಸುತ್ತದೆ. ಪುಟ್ಟಣ್ಣ ಅವರು ಕಾದಂಬರಿಯಿಂದ ಒಂದೇ ಒಂದು ಪುಟವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದರು – ಅದು ತನಗೆ ಸಾರವನ್ನು

ನೀಡಿತು ಮತ್ತು ದೃಶ್ಯಗಳು ಮತ್ತು ನಾಟಕೀಯ ವಿಷಯದೊಂದಿಗೆ ಬಲವಾದ ಚಿತ್ರಕಥೆಯನ್ನು ಹೆಣೆದಿದೆ. ಈ ಚಲನಚಿತ್ರವು ಶ್ರೀನಾಥ್ ಅವರ ವೃತ್ತಿಜೀವನವನ್ನು ಉನ್ನತ ನಾಯಕನಾಗಿ ಪುನರುಜ್ಜೀವನಗೊಳಿಸಿತು ಮತ್ತು ಕಲ್ಪನಾ ಅವರ ಅದೇ ಲೀಗ್‌ನಲ್ಲಿ ಆರತಿಯನ್ನು ಉನ್ನತ ನಟಿಯಾಗಿ ಸ್ಥಾಪಿಸಿತು. ಕಾದಂಬರಿ ಆಧಾರಿತ ಚಿತ್ರಗಳಲ್ಲಿ, ಅದರಲ್ಲೂ ನಿರ್ದೇಶಕ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳಲ್ಲಿ ತಮ್ಮ ಮನೋಜ್ಞ ಅಭಿನಯದ ಮೂಲಕ 1970 ಮತ್ತು 1980ರ ದಶಕಗಳ ಜನಪ್ರಿಯ ತಾರೆ ಎನಿಸಿದರು. ನಾಲ್ಕು ಬಾರಿ ಫಿಲ್ಮ್‌ಫೇರ್ ಪ್ರಶಸ್ತಿ ಹಾಗೂ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿರುವ ಆರತಿ, ವಿಧಾನ ಪರಿಷತ್ತಿಗೂ ನಾಮನಿರ್ದೇಶನಗೊಂಡರು. 1987ರಲ್ಲಿ ಚಿತ್ರ ರಂಗವನ್ನು ತೊರೆದು ಮದುವೆಯಾಗಿ ಅಮೆರಿಕದಲ್ಲಿ ನೆಲಸಿದ ಇವರು 2005ರಲ್ಲಿ ಮತ್ತೆ ಚಿತ್ರರಂಗಕ್ಕೆ ಬಂದು ಮಿಠಾಯಿ ಮನೆ ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟರು. ಆ ನಂತರ ಆರತಿ ಚಿತ್ರರಂಗದಿಂದ ಹಿಂದೆ ಸರಿದರು.

1954ರಲ್ಲಿ ಜನಿಸಿದ ಆರತಿ ಒಟ್ಟಾರೆಯಾಗಿ 125 ಸಿನಿಮಾಗಳಲ್ಲಿ ನಟಿಸಿದ್ದಾರೆ. ಪುಟ್ಟಣ್ಣ ಕಣಗಾಲ್ ಅವರ ನಿರ್ದೇಶನದ 12 ಸಿನಿಮಾಗಳಲ್ಲಿ ಆರತಿ ಕಾಣಿಸಿಕೊಂಡಿದ್ದಾರೆ. 1986ರಲ್ಲಿ 'ನಮ್ಮ ನಮ್ಮಲ್ಲಿ' ಎಂಬ ಟಿವಿ ಧಾರವಾಹಿಗಳನ್ನು ಸಹ ಆರತಿ ನಿರ್ದೇಶನ ಮಾಡಿದ್ದಾರೆ. 'ಮಿಠಾಯಿ ಮನೆ' ಚಿತ್ರಕ್ಕೆ ಉತ್ತಮ ಮಕ್ಕಳ ಚಿತ್ರ ಎಂಬ ವಿಭಾಗದಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಸಂದಿದೆ. ಆಕೆಯ ಮನೋಜ್ಞ ಕಲಾಪ್ರತಿಭೆ ಎಂತಹವರನ್ನು ಕೈಬೀಸಿ ಕರೆಯುತ್ತದೆ. ಹೀಗೆ ಸಾಮಾನ್ಯ ಕಲಾವಿದೆಯಾದ ಆರತಿ ಅವರನ್ನ ಬೆಳ್ಳಿಪರದೆಗೆ ತಂದು ಇಡೀ ದೇಶವೇ ನೋಡುವ ಆಗೆ ಮಾಡಿದ ಕೀರ್ತಿ ಪುಟ್ಟಣ್ಣ ಕಣಗಾಲ್ ಗೆ ಸಲ್ಲುತ್ತದೆ.

**ವಿಷ್ಣುವರ್ಧನ್**

ವಿಷ್ಣುವರ್ಧನ್ (18.9.1950 ರಿಂದ 30.12.2009) ಎಂಬ ತಮ್ಮ ರಂಗನಾಮದಿಂದ ಪರಿಚಿತರಾಗಿರು ಸಂಪತ್ ಕುಮಾರ್ ಅವರು ಮೈಸೂರಿನಲ್ಲಿ ಎಚ್.ಎಲ್.ನಾರಾಯಣ ರಾವ್ ಮತ್ತು ಕಾಮಾಕ್ಷಮ್ಮ ಅವರಿಗೆ ಜನಿಸಿದರು. ಅವರ ತಂದೆ ಕಲಾವಿದರು, ಸಂಗೀತ ಸಂಯೋಜಕರು ಮತ್ತು ಚಿತ್ರಕಥೆಗಾರರಾಗಿದ್ದರು. ಅವರು ಸಂಗೀತ ವಾದ್ಯಗಳ ಸಂಗ್ರಹಕ್ಕೆ ಹೆಸರುವಾಸಿಯಾಗಿದ್ದರು ಮತ್ತು 1962 ರ ಕನ್ನಡ ಚಲನಚಿತ್ರ ವಿಧಿವಿಲಾಸಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಮತ್ತು ಸಾಹಿತ್ಯವನ್ನು ಬರೆದಿದ್ದಾರೆ. ಅವರಿಗೆ ಆರು ಜನ ಒಡಹುಟ್ಟಿದವರಿದ್ದರು. ಅವರ ಸಹೋದರಿ ರಮಾ ಅವರು ಮೈಸೂರು ಅರಮನೆಯಲ್ಲಿ ಕಥಕ್ ಕಲಾವಿದರಾಗಿದ್ದರು ಮತ್ತು ಸಹೋದರ ರವಿ ಅವರು 1955 ರ ತಮಿಳು ಭಾಷೆಯಲ್ಲಿ ಕಾಣಿಸಿಕೊಂಡ ಬಾಲ ನಟರಾಗಿದ್ದರು. ವಿಷ್ಣುವರ್ಧನ್ ಅವರು ಮೊದಲು ಮೈಸೂರಿನ ಗೋಪಾಲಸ್ವಾಮಿ ಶಾಲೆಯಲ್ಲಿ ಮತ್ತು ನಂತರ ಬೆಂಗಳೂರಿನ ಕನ್ನಡ ಮಾದರಿ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದರು. ವಿಷ್ಣುವರ್ಧನ್ ಕನ್ನಡ, ಹಿಂದಿ, ಮಲಯಾಳಂ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ 220 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ವಿಷ್ಣುವರ್ಧನ್‌ರವರು ಪುಟ್ಟಣ್ಣ ಕಣಗಾಲ್ ಅವರ ನಾಗರಹಾವು ಚಿತ್ರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಅದು ಅವರ ಪ್ರಗತಿಯಾಗಿದೆ. ಅವರು ವಿಭಿನ್ನ ಪ್ರಕಾರಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ್ದಾರೆ.

**ನಾಗರಹಾವು**

ಪುಟ್ಟಣ್ಣ ಕಣಗಾಲ್ ನಿರ್ದೇಶನದ ಈ ಚಿತ್ರದಲ್ಲಿ ವಿಷ್ಣುವರ್ಧನ್, ಅಂಬರೀಷ್, ಆರತಿ, ಕೆ.ಎಸ್ ಅಶ್ವತ್ಥ್ ಮತ್ತು ಲೀಲಾವತಿ ಸೇರಿದಂತೆ ಹಲವಾರು ಕಲಾವಿದರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಈ ಸಿನೆಮಾಗಾಗಿ 73 ದಿನ ಶೂಟಿಂಗ್ ನಡೆಸಲಾಯಿತು. ಈ ಚಿತ್ರದ ಬಾರೇ ಬಾರೇ... ಈ ಹಾಡು ಇಡೀ

ಭಾರತೀಯ ಚಿತ್ರರಂಗದಲ್ಲಿ ಮೊದಲ ಬಾರಿಗೆ ಸ್ಲೋ ಮೋಷನ್ ನಲ್ಲಿ ಚಿತ್ರೀಕರಿಸಲಾಗಿತ್ತು. ಈ ಚಿತ್ರವು ವಿಷ್ಣುವರ್ಧನ್‌ರವರಿಗೆ ತುಂಬಾ ಯಶಸ್ಸನ್ನು ತಂದುಕೊಟ್ಟಿತು. ನಂತರ ಅವರು ಕನ್ನಡ ಚಿತ್ರರಂಗಕ್ಕೆ ಆಸ್ತಿಯಾದರು. ವಿಷ್ಣುವರ್ಧನ್‌ರವರ ಬೆಳವಣಿಗೆಗೆ ಪುಟ್ಟಣ್ಣ ಕಣಗಾಲ್ ಆಸ್ತಿಯಾದರು.

**ಕಲ್ಪನಾ (18.7.1943 – 12.5.1979)**

ಕಲ್ಪನಾ ಕನ್ನಡ ಚಿತ್ರರಂಗದ ಮಿನುಗು ತಾರೆ. ಕನ್ನಡ ಚಿತ್ರರಂಗದ ಶ್ರೇಷ್ಠ ನಟಿಯರಲ್ಲಿ ಒಬ್ಬರು. ಇವರು ಹಿರಿಯ ನಟ ಬಿ.ಆರ್.ಪಂತುಲು ನಿರ್ದೇಶನದ 1963 ರಲ್ಲಿ ಬಿಡುಗಡೆಯಾದ 'ಸಾಕು ಮಗಳು' ಚಿತ್ರದಲ್ಲಿ ನಾಯಕಿ ನಟಿಯಾಗಿ ಮೊದಲಬಾರಿಗೆ ನಟಿಸಿದರು. ಅವರ ಮನೋಜ್ಞ ಅಭಿನಯದಿಂದ ಸಾಕಷ್ಟು ಅವಕಾಶಗಳು ದೊರೆತವು. ಇವರ ಬಹುತೇಕ ಚಿತ್ರಗಳು ಸ್ತ್ರೀ ಕೇಂದ್ರೀತವಾಗಿವೆ. ಇವರು ಕನ್ನಡ ಮಾತ್ರವಲ್ಲದೆ ತಮಿಳು, ತುಳು, ಮಲಯಾಳಂ ಮತ್ತು ತೆಲುಗು ಚಿತ್ರಗಳಲಿಯ್ಯೂ ಕೆಲಸ ಮಾಡಿದರು. 1971 ರಲ್ಲಿ ಬಿಡುಗಡೆಯಾದ ಬಹು–ಪ್ರಶಸ್ತಿ–ವಿಜೇತ ಚಲನಚಿತ್ರ ಶರಪಂಜರದಲ್ಲಿನ "ಕಾವೇರಿ" ಅವರ ಅತ್ಯುತ್ತಮ ಪಾತ್ರಗಳಲ್ಲಿ ಒಂದಾಗಿದೆ, ಈ ಅಭಿನಯವು ಅತ್ಯುತ್ತಮ ನಟಿಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಆಕೆಯ ಮಾನಸಿಕ ಆಘಾತದ ವಿರುದ್ಧ ಹೋರಾಡುವ ಅತ್ಯಂತ ಉತ್ಸಾಹಭರಿತ ಚಿತ್ರಣವು ಕನ್ನಡ ನಟಿಗಾಗಿ ಅತೀ ಹೆಚ್ಚು ಅಭಿಮಾನಿಗಳನ್ನು ಗಳಿಸಿತು. ಹಿರಿಯ ಚಲನಚಿತ್ರ ನಿರ್ಮಾಪಕ ಪುಟ್ಟಣ್ಣ ಕಣಗಾಲ್ ಅವರೊಂದಿಗಿನ ಅವರ ಒಡನಾಟವು ವೃತ್ತಿಪರವಾಗಿ ಮತ್ತು ವೈಯಕ್ತಿಕವಾಗಿ 1970 ರ ದಶಕದಲ್ಲಿ ಅವರಿಬ್ಬರೂ ಬೇರೆಯಾಗುವವರೆಗೂ ಅನೇಕ ಚಲನಚಿತ್ರಗಳಲ್ಲಿ ಕೆಲಸ ಮಾಡಿದರು. ಅವರ ವೃತ್ತಿಜೀವನದಲ್ಲಿ ಕಲ್ಪನಾ ಅವರು ಅತ್ಯುತ್ತಮ ನಟನೆಗಾಗಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಪಡೆದರು.

1967ರಲ್ಲಿ ಬಿಡುಗಡೆಯಾದ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಬೆಳ್ಳಿ ಮೋಡ ಚಿತ್ರವು ಕಲ್ಪನಾರನ್ನು ಮುಂಚೂಣಿಗೆ ತಂದಿತು. 1960 ಮತ್ತು 70ರ ದಶಕದಲ್ಲಿ ಕನ್ನಡ ಚಲನಚಿತ್ರೋದ್ಯಮದಲ್ಲಿ ಪ್ರಾಬಲ್ಯ ಮೆರೆದರು ಮತ್ತು ಶರಪಂಜರ, ಗೆಜ್ಜೆ ಪೂಜೆ, ಬೆಳ್ಳಿ ಮೋಡ, ಎರಡು ಕನಸು, ಕಪ್ಪು ಬಿಳುಪು, ಬಯಲು ದಾರಿ, ಗಂಧದ ಗುಡಿ ಮತ್ತು ಬಂಗಾರದ ಹೂವುಗಳಂತಹ ಚಲನಚಿತ್ರಗಳಲ್ಲಿನ ಕೆಲವು ಲೇಖಕರ ಬೆಂಬಲಿತ ಪಾತ್ರಗಳಿಗಾಗಿ ವಿಮರ್ಶಾತ್ಮಕವಾಗಿ ಮೆಚ್ಚುಗೆ ಗಳಿಸಿದರು. ಅವರು ತಮ್ಮ ಕಾಲದ ಬಹುತೇಕ ಎಲ್ಲಾ ಪ್ರಮುಖ ನಟರು ಮತ್ತು ನಿರ್ದೇಶಕರೊಂದಿಗೆ ಕೆಲಸ ಮಾಡಿದರು. ಆದರೆ 1977 ರ ಹೊತ್ತಿಗೆ ಆಕೆಯ ಕೈಯಲ್ಲಿ ಯಾವುದೇ ಚಲನಚಿತ್ರಗಳು ಇರಲಿಲ್ಲ. ನಂತರ ಅವರು ಉತ್ತರ ಕರ್ನಾಟಕದ ನಾಟಕ ಕಂಪನಿಗಳತ್ತ ಗಮನ ಹರಿಸಲು ಪ್ರಾರಂಭಿಸಿದರು ಮತ್ತು ಮುಖ್ಯವಾಗಿ ಗುಡಿಗೇರಿ ಬಸವರಾಜ್ ಅವರ ನಾಟಕ ಕಂಪನಿಯಲ್ಲಿ ಕೆಲಸ ಮಾಡಿದರು. ಹೆಚ್ಚುತ್ತಿರುವ ಸಾಲಗಳು ಮತ್ತು ಕ್ಷೀಣಿಸುತ್ತಿರುವ ಚಲನಚಿತ್ರ ಕೊಡುಗೆಗಳೊಂದಿಗೆ ಅವರು ಆಳವಾದ ಖಿನ್ನತೆಗೆ ಹೋದರು. ಮಿನುಗು ತಾರೆ ಬಿರುದು ಪಡೆದಿದ್ದ ನಟಿ ಕಲ್ಪನಾ – ಕನ್ನಡ ಚಿತ್ರರಂಗದ ಉತ್ಸಾಹಿಗಳ ಮೇಲೆ ಹೊಂದಿದ್ದ ಪ್ರಭಾವ ಅವರ ಸಾವಿನ ನಂತರ ಇನ್ನೂ ಮಾಯವಾಗಿಲ್ಲ.

**ಶ್ರೀನಾಥ್**

ಶ್ರೀನಾಥ್‌ರವರು ದಿ28.12.1944ರಂದು ಮೈಸೂರಿನಲ್ಲಿ ರಾಮಸ್ವಾಮಿ ಶಾಸ್ತ್ರಿ ಮತ್ತು ಲಲಿತಾ ದಂಪತಿಗೆ ಜನಿಸಿದರು. ಆರಂಭದಲ್ಲಿ, ಅವರು ಹವ್ಯಾಸಿ ನಾಟಕಗಳಲ್ಲಿ ನಟಿಸುತ್ತಿದ್ದ ಇವರು ಲಗ್ನ ಪತ್ರಿಕೆ ಚಿತ್ರದಲ್ಲಿ ಸಣ್ಣ ಪಾತ್ರದೊಂದಿಗೆ ಚಲನಚಿತ್ರರಂಗವನ್ನು ಪ್ರವೇಶಿಸಿದರು. ಅದರ ನಂತರ, ಮಧುರ ಮಿಲನ ಎಂಬ ಚಿತ್ರದಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಲು ಅವರಿಗೆ ಅವಕಾಶ ಸಿಕ್ಕಿತು. 1975 ರಲ್ಲಿ ಪುಟ್ಟಣ್ಣ ಕಣಗಾಲ್ ಅವರ ಆರಾಧನಾ ಚಲನಚಿತ್ರ

ಶುಭಮಂಗಳದ ಅದ್ಭುತ ಯಶಸ್ಸು ಅವರನ್ನು ಕನ್ನಡ ಚಿತ್ರರಂಗದಲ್ಲಿ ಜನಪ್ರಿಯ ನಾಯಕನನ್ನಾಗಿ ಮಾಡಿತು.

ಶ್ರೀನಾಥ್ ಅವರು 350 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಶ್ರೀ ರಾಘವೇಂದ್ರ ವೈಭವ ಚಿತ್ರಕ್ಕಾಗಿ ಅತ್ಯುತ್ತಮ ನಟರಾಗಿ ರಾಜ್ಯ ಪ್ರಶಸ್ತಿಯನ್ನು ಮತ್ತು ಬೆಸುಗೆ ಚಿತ್ರಕ್ಕೆ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. 1982 ರಲ್ಲಿ ಅವರು ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಮಾನಸ ಸರೋವರ' ಚಿತ್ರವು ಶ್ರೀನಾಥ್‌ರವರಿಗೆ ದೊಡ್ಡ ಯಶಸ್ಸನ್ನು ತಂದುಕೊಟ್ಟಿತು. ಇವರ ಕಲಾ ಸೇವೆಯನ್ನು ಪರಿಗಣಿಸಿ ಹಲವಾರು ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. 2003 ರಲ್ಲಿ, ಬೆಂಗಳೂರಿನ ಆರ್ಯ ಸುಗುಮಾ ಸಂಗೀತ ಅಕಾಡೆಮಿ ಟ್ರಸ್ಟ್‌ನಿಂದ ಶ್ರೀನಾಥ್ ಅವರಿಗೆ ಕಲಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ರಾಜ್ಯ ಚಲನಚಿತ್ರ ಪ್ರಶಸ್ತಿಗಳು, ಅವರು ಕನ್ನಡ ಚಿತ್ರರಂಗಕ್ಕೆ ಅವರ ಜೀವಮಾನದ ಸಾಧನೆಗಾಗಿ ಪ್ರತಿಷ್ಠಿತ ಡಾ. ರಾಜ್ಕುಮಾರ್ ಪ್ರಶಸ್ತಿಯಿಂದ ಗೌರವಿಸಲ್ಪಟ್ಟರು. 100 ಚಲನಚಿತ್ರಗಳನ್ನು ಪೂರ್ಣಗೊಳಿಸಿದ ನಂತರ ಅವರಿಗೆ 1982 ರಲ್ಲಿ "ಅಭಿನಯ ಚಕ್ರವರ್ತಿ" ಎಂಬ ಬಿರುದನ್ನು ನೀಡಲಾಯಿತು. ಒಟ್ಟಾರೆಯಾಗಿ ಹೇಳುವುದಾದರೆ ಶ್ರೀನಾಥನ ಬೆಳ್ಳಿತೆರೆಗೆ ತಂದು ಅವರನ್ನು ಒಳ್ಳೆಯ ಕಲಾವಿದನಾಗಿ ನಟನಾಗಿ ಮತ್ತೆ ನಿರ್ದೇಶಕನಾಗಿ ಮಾಡುವುದರಲ್ಲಿ ಪುಟ್ಟಣ್ಣ ಕಣಗಾಲ್ ಸಾಕಷ್ಟು ಪರಿಶ್ರಮ ಇದೆ ಎಂದು ಹೇಳಬಹುದು.

ಪುಟ್ಟಣ್ಣ ಕಣಗಾಲ್ ಕನ್ನಡ ಚಿತ್ರರಂಗ ಕಂಡ ಮಹಾನ್ ಸಾಧಕರಲ್ಲಿ ಒಬ್ಬರಾಗಿದ್ದಾರೆ. ಇವರು ನಿರ್ದೇಶಿಸಿದ ಅಷ್ಟು ಚಿತ್ರಗಳು ಬಹಳಷ್ಟು ಜನ ಮೆಚ್ಚುಗೆಯನ್ನು ಪಡೆದಿವೆ. ಅಷ್ಟೇ ಅಲ್ಲದೆ ಸಾಕಷ್ಟು ಹೊಸ ಹೊಸ ಕಲಾವಿದರನ್ನು ಪ್ರೋತ್ಸಾಹಿಸಿ ಬೆಳೆಸುವಲ್ಲಿ ಅವರ ಪರಿಶ್ರಮ ಸಾಕಷ್ಟಿದೆ. ಇಂದಿನ ಯುವ ನಿರ್ದೇಶಕರಿಗೆ ಇವರ ಕೊಡುಗೆ ಅಪಾರವಾಗಿದೆ ಅವರ ನಿರ್ದೇಶನದ ಶೈಲಿ ಕಾರ್ಯವೈಖರಿ ಮತ್ತು ಅವರ ಕ್ಯಾಮರಾ ನಿರ್ದೇಶನ ಹೀಗೆ ಎಲ್ಲವೂ ಮಾದರಿಯಾಗಿದೆ ಎಂದು ಹೇಳಬಹುದು. ಕನ್ನಡ ಚಿತ್ರರಂಗದ ಸೃಜನ ಶೀಲ ನಿರ್ದೇಶಕ ಪುಟ್ಟಣ ಕಣಗಾಲ್ ಸಾವನ್ನಪ್ಪಿ ನಾಲ್ಕು ದಶಕಗಳ ನಂತರ, ಮೈಸೂರು ಬಳಿಯ ಅವರ ಪೂರ್ವಿಕರ ಮನೆಯನ್ನು ಸ್ಮಾರಕವಾಗಿಸಲು ಚಲನಚಿತ್ರ ಅಕಾಡೆಮಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಪಿರಿಯಾಪಟ್ಟಣ ತಾಲೂಕಿನ ಕಣಗಾಲ್ ಗ್ರಾಮದಲ್ಲಿರುವ ಮನೆಯನ್ನು ಸ್ಮಾರಕ ಮತ್ತು ಲೈಬ್ರರಿ ಆಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಶತಮಾನದಷ್ಟು ಹಳೆಯದಾದ, ಶಿಥಿಲಗೊಂಡಿರುವ ಈ ಕಟ್ಟಡವನ್ನು ಒಮ್ಮೆ ಪುನರ್ ನಿರ್ಮಿಸಿದರೆ ಇದು ಆಕರ್ಷಕ ಪ್ರವಾಸಿ ತಾಣ ಮತ್ತು ಸಿನಿಮಾ ಆಸಕ್ತರಿಗೆ ಅಧ್ಯಯನ ಕೇಂದ್ರವಾಗಲಿದೆ ಎಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿರುವ ಕರ್ನಾಟಕ ಚಲನಚಿತ್ರ ಅಕಾಡೆಮಿ ಸದಸ್ಯರೊಬ್ಬರು ತಿಳಿಸಿದ್ದಾರೆ.

**ಉಪಸಂಹಾರ**

ಭಾರತೀಯ ಚಿತ್ರರಂಗಕ್ಕೆ ನಿರಂತರ ಶ್ರೇಷ್ಠ ಮತ್ತು ಸಾಂಪ್ರದಾಯಿಕ ಚಲನಚಿತ್ರಗಳನ್ನು ನೀಡಿದ ಪುಟ್ಟಣ್ಣ ಕಣಗಾಲ್ ಅವರು ಕನ್ನಡ, ಮಲಯಾಳಂ, ತಮಿಳು, ತೆಲುಗು ಮತ್ತು ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರ ಗೆಜ್ಜೆ ಪೂಜೆ ಮತ್ತು ಶರಪಂಜರ ಮೂರು ರಾಷ್ಟ್ರಪ್ರಶಸ್ತಿಗಳನ್ನು ಪಡೆದರೆ, ಹಲವಾರು ಸಿನಿಮಾಗಳು ರಾಜ್ಯ ಪ್ರಶಸ್ತಿಗಳನ್ನು ಪಡೆದಿವೆ. ವಿಷ್ಣುವರ್ಧನ್, ಅಂಬರೀಶ್, ಕಲ್ಪನಾ, ಆರತಿ ಸೇರಿದಂತೆ ಕನ್ನಡ ಚಿತ್ರರಂಗದ ಕೆಲವು ತಾರೆಯರು ಇವರ ಗರಡಿಯಲ್ಲಿಯೇ ಬೆಳೆದವರು. 60 ರ ದಶಕದ ಆರಂಭದಲ್ಲಿ ಮತ್ತು 70 ರ ದಶಕದ ಉತ್ತರಾರ್ಧದಲ್ಲಿ ಅವರ ಸಾಮಾಜಿಕ ಸಂಬಂಧಿತ ವಿಷಯಾಧಾರಿತ ಕೌಟುಂಬಿಕ ಮನರಂಜನಾ ಚಿತ್ರಗಳು ಅಸಾಮಾನ್ಯ ಎಂದು ಪರಿಗಣಿಲ್ಪಟ್ಟಿವೆ. 1985ರಲ್ಲಿ ಅವರು ಮೃತಪಟ್ಟಾಗ ಕೇವಲ 52 ವರ್ಷ ವಯಸ್ಸಾಗಿತ್ತು. ಪುಟ್ಟಣ ಕಣಗಾಲ್ ಅವರ ಸಿನಿಮಾ ಶೈಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆ ಪಡೆದಿತ್ತು. ಪ್ರತಿಯೊಬ್ಬ

ಕನ್ನಡಿಗನು ಅವರ ಬಗ್ಗೆ ಹೆಮ್ಮೆಪಡುತ್ತಾನೆ ಎಂದು ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ತಿಳಿಸಿದ್ದಾರೆ. ಕಾವೇರಿ ನದಿಗೆ ಸಮೀಪವಿರುವ ಪಿರಿಯಾಪಟ್ಟಣ ತಾಲೂಕಿನಲ್ಲಿರುವ ಅವರ ಪೂರ್ವಿಕರ ಮನೆಯ ಬಗ್ಗೆ ನಮಗೆ ತಿಳಿಯಿತು. ಇದು ಪ್ರಶಾಂತ ಸ್ಥಳದಲ್ಲಿದೆ. ಶಿವಮೊಗ್ಗದ ಕುಪ್ಪಳ್ಳಿಯಲ್ಲಿರುವ ಕುವೆಂಪು ಅವರ ಸ್ಮಾರಕ ಕವಿಮನೆಯಂತೆಯೇ ಇದನ್ನು ಸ್ಮಾರಕವನ್ನಾಗಿ ಮಾಡಲು ನಾವು ಬಯಸಿದ್ದೇವೆ ಎಂದು ಅವರು ಹೇಳಿದರು. ಕಾಮಗಾರಿ ಕೈಗೆತ್ತಿಕೊಳ್ಳಲು ಆರಂಭದಲ್ಲಿ 10 ಕೋಟಿ ರೂಪಾಯಿ ಬೇಕಾಗಬಹುದು ಎಂದು ಪುರಾಣಿಕ್ ಹೇಳಿದ್ದಾರೆ. ಕಣಗಾಲ್ ಅವರ ಮನೆಯ ದುಸ್ಥಿತಿಯನ್ನು ತೋರಿಸುವ ಫೋಟೋ ಟ್ವಿಟರ್‌ನಲ್ಲಿ ವೈರಲ್ ಆದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಶೀಘ್ರದಲ್ಲೇ, ಅಕಾಡೆಮಿಯು ಮನೆಯನ್ನು ಸ್ಮಾರಕವಾಗಿ ಅಭಿವೃದ್ಧಿಪಡಿಸಲು ನಿರ್ಣಯವನ್ನು ಅಂಗೀಕರಿಸಿತು ಎಂದು ಪುರಾಣಿಕ್ ತಿಳಿಸಿದರು.

"ಬುಲ್ ಬುಲ್ ಮಾತಾಡಕ್ಕಿಲ್ವಾ, ನಾ ಬಂದೇ ನಾ ನೋಡ್ದೆ ನಾಗೆದ್ದೆ..", "ನೀನೇ ಸಾಕಿದಾ ಗಿಣಿ " ಮುಂತಾದ ಸಂಭಾಷಣೆಗಳ ಮೂಲಕ ಕನ್ನಡಿಗರ ನಡುವೆ ಅಚ್ಚಳಿಯದೆ ಪುಟ್ಟಣ್ಣ ಕಣಗಾಲ್ ನಮ್ಮ ನಡುವೆ ಜೀವಂತವಾಗಿದ್ದಾರೆ. ಅವರು ನಿರ್ದೇಶಿಸಿದ ಚಲನಚಿತ್ರಗಳು ನಿತ್ಯ ನೂತನವಾಗಿ ನಮ್ಮ ನಡುವೆ ಇವೆ. ಅವರು ನಿರ್ದೇಶಿಸಿದ ಚಿತ್ರಗಳೆಲ್ಲವೂ ಸಾಹಿತ್ಯ ಕೃತಿ ಆಧಾರಿತವಾಗಿವೆ. ಮಹಿಳಾ ಪ್ರಧಾನ ಮತ್ತು ದುಃಖಾಂತ್ಯ ಸಿನಮಾಗಳನ್ನು ನಿರ್ದೇಶಿಸಿ ಹೊಸ ಟ್ರೆಂಡನ್ನು ಹುಟ್ಟು ಹಾಕಿದ್ದು ಪುಟ್ಟಣ್ಣರವರ ವಿಶೇಷತೆಗಳಲ್ಲಿ ಒಂದು. ಸಾಹಿತ್ಯ ಕೃತಿಗಳನ್ನು ಚಲನಚಿತ್ರಗಳಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಕರಗತಮಾಡಿಕೊಂಡ ನಿರ್ದೇಶಕ ಎಂದರೆ ಪುಟ್ಟಣ್ಣರವರೆ. ಕೇವಲ ಕಾದಂಬರಿಗಳಲ್ಲ, ಕಥೆಗಳಲ್ಲ, ಕವಿ, ಗೀತೆಗಳೂ ಇವರ ಚಿತ್ರಗಳಲ್ಲಿ ಹೂವಾಗಿ ಅರಳಿವೆ ನವಿಲಾಗಿ ನರ್ತಿಸಿವೆ.

ಪುಟ್ಟಣ್ಣ ಕಣಗಾಲ್ ರವರು ಚಿತ್ರಿಸಿರುವ 24 ಚಿತ್ರಗಳಲ್ಲಿ 18 ಚಿತ್ರಗಳು ಕಾದಂಬರಿ ಆಧಾರಿತ ಚಿತ್ರಗಳು. ತ್ರಿವೇಣಿಯವರ 'ಬೆಳ್ಳಿಮೋಡ', 'ಶರಪಂಜರ', ತರಾಸುರವರ 'ನಾಗರಹಾವು', 'ಮಸಣದ ಹೂ', ಎಂ.ಕೆ ಇಂದಿರಾ ಅವರ 'ಗೆಜ್ಜೆಪೂಜೆ', ಆರ್ಯಾಂಭ ಪಟ್ಟಾಭಿಯವರ 'ಕಪ್ಪು ಬಿಳುಪು', ('ಋಣ') 'ಋಣಮುಕ್ತಳು', ಭಾರತೀಸುತರವರ 'ಎಡಕಲ್ಲುಗುಡ್ಡದ ಮೇಲೆ', ಅಶ್ವತ್ಥರವರ 'ರಂಗನಾಯಕಿ', ದೇವಕೀ ಮೂರ್ತಿಯವರ 'ಉಪಾಸನೆ' ಮೊದಲಾದ ಕಾದಂಬರಿಗಳನ್ನು ಇಲ್ಲಿ ಹೆಸರಿಸಬಹುದು.

ಪುಟ್ಟಣ್ಣನವರ ಭೌತಿಕ ಶರೀರ ಹೋಯ್ತು, ಆದರೆ ಕನ್ನಡ ಚಿತ್ರಪ್ರೇಮಿಗಳು, ಕನ್ನಡ ಚಿತ್ರರಂಗ ಪುಟ್ಟಣ್ಣನವರನ್ನು ಮರೆಯುವುದಿಲ್ಲ. ಒಂದು ಚಿತ್ರಮಂದಿರಕ್ಕೆ ಅವರ ಹೆಸರೇ ಇದೆ. ಅವರ ಹೆಸರಿನ ಪ್ರಶಸ್ತಿಗಳೂ ತಯಾರಾಗುತ್ತಿವೆ. ಅವರ ಕುರಿತು ಎಂ. ಕೆ. ಇಂದಿರಾ ಅವರು ಪುಸ್ತಕದಲ್ಲಿ ಸುಂದರವಾಗಿ ಬರೆದಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಬಸವೇಗೌಡ ಡಿ.ಬಿ. (2012). *ನಾ ಕಂಡ ಪುಟ್ಟಣ್ಣ ಕಣಗಾಲ್.* ಕನ್ನಡ ಪುಸ್ತಕ ಪ್ರಾಧಿಕಾರ.
- ಬಸವೇಗೌಡ ಡಿ.ಬಿ. *ಬೆಳ್ಳಿತೆರೆಯ ಭಾವಶಿಲ್ಪಿ ಪುಟ್ಟಣ್ಣ ಕಣಗಾಲ್.* ಸಪ್ನ ಬುಕ್ ಹೌಸ್.
- ಇಂದಿರಾ ಎಂ.ಕೆ. (1986). *ಕನ್ನಡ ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್.* ಹೇಮಂತ ಸಾಹಿತ್ಯ
- ಹಲವು ಅದ್ಭುತ ಕಲಾವಿದರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದವರು ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ – ಟಿವಿ9
- ಪುಟ್ಟಣ್ಣ ಕಣಗಾಲ್ ಮನೆ ಸ್ಮಾರಕವಾಗಿ ಅಭಿವೃದ್ಧಿ – ಪ್ರಜಾವಾಣಿ
- ಪುಟ್ಟಣ್ಣ ಕಣಗಾಲ್ ಜೀವನಚರಿತ್ರೆ – ಫಿಲ್ಮ್ ಬಿಟ್

- ಶೃತಿ ಹೆಗಡೆ. ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ನೆನಪು.
- Shilpa Sebastian. (2019, November 29,). Remembering Kannada cinema legend Puttanna Kanagal. *The Hindu*
- https://www.thehindu.com/entertainment/movies/friends-and-colleagues-of-puttana-kanagal-remember-him-on-his-86th-birthday/article30115174.ece
- Kiran Kumar D. (2023). *Kannada Cinema. Social Concern and Democratic Thoughts in Upendra's Films*
- *https://books.google.co.in/books/about/Kannada_Cinema_Social_Concern_and_Democr.html?id=mmfmEAAAQBAJ&redir_esc=y*